ಭದ್ರಪಡಿಸುತ್ತ 'ಥೂ ಅವನ ಬಾಯಿಗೆ ಮಣ್ಣಾಕ, ಇದನ್ ಬ್ಯಾರೆ ಬಿಟ್ಟ, ಇದರಾವಳಿಯಿಂದ ಬೀದಿಲಿ ಮಕ್ಳುಮರಿ ಓಡಾಡಂಗಿಲ್ಲ' ಎಂದು ನಡ ಬಗ್ಗಿಸಲಾರದೆ ಗೊಣಗಾಡುತ್ತಿದ್ದಳು. ಈ ಊರ ಗಟ್ಟಿಮುಟ್ಟಾದ ಗಂಡಸರು ದೂರದಲ್ಲೇ ನಿಂತು ದೊಣ್ಣೆ ತೋರಿಸಿ ಒಂದೇಟೂ ಹೊಡೆಯದೆ ಅದ್ದರಿಸುತ್ತಿದ್ದರು. ಕೆಲವರು ಮುಂಗೋಪಗೊಂಡು ಹೊಡದೇಬಿಡುತ್ತಿದ್ದರು. ಆಗ ಊರ ಹಿರಿಯರು 'ಹೋಯ್' ಎಂದು ಗದರಿ, 'ದೇವರ ಬಸವ ಅಂದ್ರೆ ಏನಂದ್ಕೊಂಡಿದ್ದೀಯಾ? ಮನೆಮಂದಿಗೆಲ್ಲ ರಕ್ತಬೇಧಿ' ಅಂತ ಅಂದು ದೇವರ ಮಹಿಮೆ ನೆನಪಿಸಿ, ಬಸವನ ಹೊಡೆಯಲು ಹೋದವರ ಎದೆ ಝಲ್ಲೆನ್ನುವಂತೆ ಮಾಡುತ್ತಿದ್ದರು.

ಅಲ್ಲೇ ಕುಂತು ಎಲ್ಲವನ್ನೂ ನೋಡುತ್ತಿದ್ದ ಬಸಪ್ಪ 'ಈ ಹಾಳಾದ್ ನಾಯಿಗಳು ಇದನ್ನ ಸುಮ್ನೆಯಾದ್ರೂ ಕೆಣಕ್ತವೆ, ಅದರ್ಪಾಡಿಗದು ಸುಮ್ಮನೆ ಹೋಗ್ತಾ ಇಲ್ವಾ. ಬಾರೆ ಇಲ್ಲಿ ನೋಡು' ಎಂದು ಹೆಂಡತಿ ರಾಮಕ್ಕನಿಗೆ ಕೂಗಿ ತೋರಿದ. ಇತ್ತ ದೇವರ ಹೊಲದ ದಿಕ್ಕಿನಿಂದ ಕಸದ ಕುಕ್ಕೆ ಕಂಕ್ಳಲ್ಲಿ ಸಿಕ್ಕಿಸಿಕೊಂಡು ತಿಪ್ಪೆಗೆ ಕಸ ಸುರಿಯಲು ಹೋಗಿ ಬರುತ್ತಿದ್ದ ಗಾಣಿಗರ ಬಾಗಮ್ಮ ಕಸದ ಕುಕ್ಕೆಯನ್ನು ಬೀದಿ ಬದಿಯ ಆ ಗೋಣಿ ಮರಕ್ಕೆ ತಪ್ಪನೆ ಬಡಿದು ಕುಕ್ಕೇಲಿ ಸಿಕ್ಕಿಕೊಂಡ ಕಸ ಗೋಣಿ ಮರದ ಬುಡಕ್ಕೆ ಬೀಳಿಸುತ್ತ ಅತ್ತಗಿತ್ತಗಿ ತಿರುಗಿ ನೋಡಿ, 'ಅಪ್ಪೋ, ಈ ಬಸವನ್ಬಗ್ಗೆ ನಿನಗೆ ಗೊತ್ತಿಲ್ಲ. ನಿನ್ನೆ ಬುಡ್ಡಯ್ಯನ ಸೊಸೆ ಸೊಪ್ಪಿನ್ ಕುಕ್ಕೆ ಈಸ್ಕಂಡು ಬರಕ್ಕೆ ಅಂತ ಓದವಳ್ನ ಅಂಗೆ ಅಂತರ್ನಾಕೆ ಕೋಡಲ್ಲಿ ಎತ್ತಿ ಎಸಿತಿದ್ದಂಗೆ, ಅವಕ್ಕ ಇಲ್ಲಿಂದ ಅಷ್ಟುದೂರ ಹೋಗಿ ಬಿತ್ತು. ಮತ್ತೆ ಕಾಲ್ಕೆರ್ಕಂಡೋಗಿ ತಿವೀತು. ಇಷ್ಟೂ ಕಣ್ಣೆದುರಿಗೇ ನಡಿತು. ಅಷ್ಟೊತ್ತಿಗೆ ಬೀದಿಲಿ ಅತ್ತಿಂದ ಇತ್ತಿಂದ ಓಡೋಡಿ ಬಂದವರು ಅದನ್ನ ಹೆದರಿಸಿ ಓಡಿಸಿದ್ರು. ಯಾರೂ ಬರಲಿಲ್ಲ ಅಂದಿದ್ರೆ ಇಷ್ಟೊತ್ಗೆ ಈ ಬುಡ್ಡಯ್ಯನ ಸೊಸೇನ ನಾವು ಕಣ್ಣಾಗೆ ನೋಡಂಗೇ ಇರ್ಲಿಲ್ಲ.'

'ನೀನೇಳ್ದಂಗೆ ಈ ಬಸವ ಅಷ್ಟೊಂದು ಸುಲಭ ಅಲ್ಲ' ಅಂತಂದು ಅವಕ್ಕ ಮಂಕ್ರಿ ಎತ್ತಿ ಕಂಕ್ಳಿಗೆ ಸಿಕ್ಕಿಸಿಕೊಳ್ಳೋ ಹೊತ್ತಿಗೆ, ಆ ಮಂಕ್ರಿಲಿ ಅದೇನೋ ಎದ್ದು ಮುಲಮುಲ ಅಂತ ಹರಿದಾಡ್ದಂಗಾಯ್ತು. ಅಯ್ಯೋ ಇದ್ರ ಸೆಲೆಗೆಟ್ಹೋಗ ಏನಿದು ಅಂತ ಮಂಕ್ರಿ ಒಳಗೆ ನೋಡ್ದಾಗ ಎದ್ದು ಮುಲಮುಲ ಅಂತ ಹರಿದಾಡಿದ ಸಾವುರ್ಕಾಲ್ ಹುಳ ನೋಡಿ, 'ಅಯ್ಯೋ ಏಟ್ಹಾಗ್ತ ಐತೆ. ಎಲ್ಲಾರ ಕಚ್ಚಿದ್ರೆ ಏನ್ಗತಿಯಮ್ಮ' ಅಂದು ಬೆರಳಲ್ಲೇ ಚಿಮ್ಮಿ ಮುಂದ್ಕೆ ಹೆಜ್ಜೆ ತೆಗೀತಾ, 'ಯಾವುದ್ಕೂ ನೀನು ಹುಸಾರು ಕಣಪ್ಪೋ' ಎನ್ನುತ್ತಾ ಪೂಜಾರಿ ಬಸಪ್ಪನಿಗೆ ಹೇಳಿ ಅತ್ತ ಹೋದಳು.

ಮನೆ ಬಾಗಿಲಲ್ಲಿ ಕಾಣಿಸಿಕೊಂಡ ರಾಮಕ್ಕ 'ಅಯ್ಯೋ ನೀನಾರೂ ಹೇಳು, ನನ್ನ ಮಾತ್ಗೆ ಸೊಪ್ಪೇ ಹಾಕಲ್ಲ. ನನ್ಗೂ ಹೇಳಿ ಸಾಕಾತು, ಮುಂದೇ ಏನಾದ್ರೂ ಆಗ್ಲಿ, ಇವೆಲ್ಲ ನೋಡ್ಗಿಚ್ಚು' ಅನ್ನುತ್ತಾ ಒಳ ಹೋದಳು. ಊರವರು ಒಂದಷ್ಟು ಜನ ಮತ್ತು ಬೀದಿ ನಾಯಿಗಳು ಸೇರಿ ಈ ಬಸವನನ್ನು ಹೆದರಿಸಿ ಅತ್ತ ಚನ್ನಪ್ಪಯ್ಯನ ಈಚಲು ವನದ ಕಡೆಗೆ ಅಟ್ಟಿದರು. ಆಗ ಬೀದಿ ತಣ್ಣಗೆ ಎದ್ದು ಓಡಾಡುತ್ತ ಅತ್ತಿಂದ ಇತ್ತಿಂದ ಹೊಲಮನೆಗೆ ಹೋದವರು, ಬರೋದು ಹೋಗೋದು ನಡೀತಿತ್ತು. ಬಸವನ ಹಿಂದೆಯೇ ಎಗ್ಗುಸಿಗ್ಗಿಲ್ಲದೆ ಬಂದ ಮಲ್ಲನ ಗಾಡಿಯೂ ಓಡಿ ಮರೆಯಾಗಿದ್ದರಿಂದ, ಊರು ಕೇರಿ ಬೀದಿ ಗಲ್ಲಿಗಳಲ್ಲಿ ಇದ್ದ ಸಣ್ಣ ಸಣ್ಣ ಜಾಗಗಳಲ್ಲೂ ಜೀವ ತುಂಬಿದ ಪ್ರಸನ್ನತೆಯ ಸಂಕೇತಗಳು ಹಠಾತ್ತನೆ ಮೈ ಕೊಡವಿ ಎದ್ದು ಹೊರಬಂದವು.

* * *

'ಅಲ್ಲ, ಅಮಾವಾಸ್ಯೆ ಹಿಂದೆ ಮುಂದೆ ಬರಿ ಮೈಯಲ್ಲಿ ಅಲ್ಲಿಂದ ಬಂದಿದಿಯಲ್ಲಾ, ಅವನ್ಯಾವನು ನಿನ್ನ ಬಟ್ಟೆ ಎತ್ಕಂಡೋದವನು? ಅಲ್ಲೇ ನೋಡಿ ಮುಖಕ್ಕೆ ಉಗಿಯದಲ್ವಾ?' ದ್ಯಾವಕ್ಕ ಗೊಣಗುತ್ತ ಕಸ ಮುಸುರೆ ಎತ್ತುತ್ತಿದ್ದಳು. ತ್ಯಾಗನಿಗೆ ಮಲ್ಲಣ್ಣನೇ ಇರಬೇಕೆನಿಸಿದರೂ ಬಾಯಿ ತೆಗೆಯಲಿಲ್ಲ. ಅದು ಇವರ ಜೀವನದಲ್ಲಿ ಕವಿದ ಕತ್ತಲಿನ ಸ್ವಭಾವ ಅನ್ನುವುದು ಲೇಸು. ದ್ಯಾವಕ್ಕನ ಗೊಣಗು, ತ್ಯಾಗನ ಮೌನದ ನಡುವೆ ಯಾರೋ ಬೀದಿಯಲ್ಲಿ ಪುಂಡಾಟ ಮಾಡುತ್ತಿದ್ದಂತೆ ಕೇಳಿಸಿ ತ್ಯಾಗನ ಕಿವಿ ಮೊಲದ ಕಿವಿಯಂತೆ ನೆಟ್ಟಗಾದವು. ಕಣ್ಣು ಬಾಗಿಲ ಕಡೆ ನೆಟ್ಟವು. ಶಬ್ದ ಬಿಟ್ಟು ಏನೂ ಕಾಣದೆ ಮತ್ತೆ ಇಣುಕಿದ, ಬೀದಿಗೆ ಕಿವಿಯಾದ. ಅಲ್ಲಿ ಹಬ್ಬದ ವಾತಾವರಣದಂತೆ ಕಂಡುಬಂದ ಮೇಲೆ ಅದು ಚೇಷ್ಟೆಯಲ್ಲವೆಂದು ತಿಳಿಯಲು ತುಂಬಾ ಸಮಯವೇನೂ ಆಗಲಿಲ್ಲ.

ಕೇಳು ಕೇಳುತ್ತಿದ್ದಂತೆ ಹೊರಗೆ ಸದ್ದು ಗದ್ದಲ, ಕಣ ಕಣವೆಂದು ಕೇಳಿ ಬರುತ್ತಿರುವ ತಮಟೆ ಸದ್ದು ಕೇಳಿ ಊರಿಗೆ ಹಗಲುವೇಷಧಾರಿಗಳು ಬಂದಿರುವುದು ತಿಳಿಯಿತು. ಲಯಬದ್ಧವಾದ ತಾಳ 'ಆಹಾಹಾ ರುದ್ರ, ಆಹಾಹಾ ದೇವ' ಎಂದು ವೀರಗಾಸೆಯವರು ಕತ್ತಿ ಹಿಡಿದು ಕುಣಿಯುತ್ತಿದ್ದರು. ಒಳಗಿದ್ದವನಿಗೆ ಕುತೂಹಲ. ಅವ್ವನಿಗೆ ಅಂಜಿಕೊಂಡು ಅತ್ತ ಕಣ್ಣಾಯಿಸಿ ನೋಡಲೂ ಆಗದೆ ಕುಳಿತಿದ್ದ. ಇವನ ಈ ಕಳವಳಕ್ಕೆ ಮೂಲವಾದದ್ದು ಇವನವ್ವ ಆಗಲೇ ಬಸವನನ್ನು ನೋಡಲು ಹೊರಗೆ ಬಿಡದಿದ್ದದ್ದು. ಆದರೂ ಮನೆಯೊಳಗೆ ಮಾಮೂಲಿ ಆಟವಾಡುತ್ತಿದ್ದ. ನಿಶ್ಶಬ್ದ ಮೌನದಲ್ಲಿ ಒಳಗೆ ಸಂವಾದ, ಹೊರಗೆ ಸದ್ದುಗದ್ದಲ, ಹಲಗೆಯ ಸಪ್ಪಳ ಇದ್ದರೂ ಮಗನ ಮನಸ್ಸು ಅತ್ತ ವಾಲದೆ ಇದ್ದುದನ್ನು ನೋಡಿದ ದ್ಯಾವಕ್ಕ, 'ಬೀದೀಲಿ ಆಡೋ ಮಕ್ಕಳನ್ನ ಮನೆಯೊಳಗೆ ಕಟ್ಟಿಹಾಕುವುದುಂಟೆ?' ಅನ್ನುತ್ತಾ ಮನಸ್ಸು ಕರಗಿ ಆಚೆ ಹೋಗಲು ಹೇಳಿದಳು.

ಅವ್ವನ ಬಾಯಿಂದ ಈ ಮಾತು ಬಂದದ್ದೇ ತಡ, ಇದನ್ನೇ ಕಾಯುತ್ತಿದ್ದವನಂತೆ ಮನೆಯಿಂದ ಎದ್ದು ಹಾರಿದ್ದ. ಗಂಡ ಸಿದ್ದಣ್ಣ ಹೋದ ಮೇಲೆ ಸಂಪೂರ್ಣ ಎಲ್ಲವನ್ನೂ ತ್ಯಜಿಸಿದಂತೆ ಬದುಕುತ್ತಿದ್ದವಳ ಕಣ್ಣಲ್ಲಿ ಇವತ್ತು ಅಭಿಮಾನ ತುಂಬಿ, ಎರಡನಿ ಕಣ್ಣೀರು ತನಗರಿವಿಲ್ಲದೆ ಕೆನ್ನೆ ಮೇಲೆ ಬೆಚ್ಚಗೆ ಹರಿದವು. ಗುಂಪು ಗುಂಪಾಗಿ ನಿಂತ ಜನರ ಮಧ್ಯೆ ಹೇಗೋ ನುಸುಳಿ ಹೋಗಿ ಆಟ ಹಾಕುತ್ತಿದ್ದವರ ಮುಂದೆ ನಿಂತ ತ್ಯಾಗನಿಗೆ ವೀರಗಾಸೆ, ಹನುಮಂತನ ವೇಷ, ಕರಡಿ ಕುಣಿತ, ಮಾಯಿತಲೆ ಗೊಂಬೆ ಕುಣಿತ ಈ ಎಲ್ಲ ದೃಶ್ಯವೈಭವಗಳನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಯಿತು. ಜಾತ್ರೆಯಂತೆ ಸೇರಿದ್ದ ಜನರನ್ನ ನೋಡಿದ ತ್ಯಾಗನಿಗೆ ದೊಡ್ಡವರ ಮದುವೆಯ ಮೆರವಣಿಗೆ ನೆನಪಿಗೆ ಬಂದು ಮನಸ್ಸು ಅಲ್ಲೆಲ್ಲೋ ಅಡ್ಡಾಡತೊಡಗಿತು. ತಮಟೆಯ ಶಬ್ದಕ್ಕೆ ತನ್ನ ಜನ್ಮದಲ್ಲೇ ಈವರೆಗೆ ಕೇಳಿರದ, ಕಂಡಿರದ ವೈಭವ ತನ್ನ ಬಾಗಿಲವರೆಗೆ ಬಂದುದ ಕಂಡು ಮೈ ನವಿರೇಳಿತು.

ಊರ ರೈತರ ಹೆಣ್ಣುಮಕ್ಕಳು ಹೊಸ ಫಲ, ಕಾಳುಕಡ್ಡಿ, ದವಸಧಾನ್ಯ ತಂದು ವೇಷಧಾರಿಗಳಿಗೆ ಸಂತೋಷದಿಂದ ನೀಡುತ್ತಿದ್ದರು. ಇದನ್ನು ನೋಡಿದ ತ್ಯಾಗನು ಇವನ ಅವ್ವನಿಂದ ಉಳ್ಳಿ ತಂದು ನೀಡಿದ. ಹೀಗೆ ಇವರೆಲ್ಲ ದಾನ ನೀಡುವಾಗ ಕೈ ತಪ್ಪಿ ದವಸ ಧಾನ್ಯದ ಮುತ್ತುಗಳು ಅಲ್ಲಲ್ಲೇ ಚೆಲ್ಲಾಡಿ ಊರ ಹಾದಿ ಹೊಳೆಯುತ್ತಿತ್ತು. ಎಲ್ಲವನ್ನೂ ನಿಂತು ನೋಡಿ ಉಲ್ಲಾಸದಲ್ಲಿದ್ದ ಈ ತ್ಯಾಗನತ್ತ ಒಂದಷ್ಟು ಊರ ಮಂದಿ ಅದೇನೇನೋ ಮನಸ್ಸಿಗೆ ಬಂದಂತೆ ಮಾತನಾಡಿಕೊಂಡು ಅವರವರ ಮನೆಯ ದಾರಿ ಹಿಡಿದಿದ್ದರು.

ಅದ್ಯಾರೋ ಲಿಂಗಾಯಿತರ ಪೈಕಿ ಇಬ್ಬರು ಮಾತನಾಡುತ್ತ 'ಇವರಪ್ಪನ ಕೊಲೆಯಾಗಿ ಎಷ್ಟು ವರ್ಷ ಆಯಿತೋ ಕಾಣೆ' ಅಂದರೆ, ಅದಕ್ಕೆ ಆ ಕೆಳಗಿನ ಕೇರಿಯ ಮತ್ತೊಬ್ಬಳು 'ಎಷ್ಟು ವರ್ಷವಾಯಿತೋ ನಾ ಕಾಣೆ ಕಣವ್ವ?' ಎಂದು ಬೆಚ್ಚಿ ಅತ್ತ ಮರೆಯಾದಳು. ತ್ಯಾಗ ಇಂಥ ಮಾತುಗಳನ್ನು ಕೇಳಿಸಿಕೊಂಡನಾದರೂ ಅರ್ಥವಾಗದೆ ಮನಸ್ಸಿನಲ್ಲೇ ಉಳಿದುಬಿಟ್ಟವು.

ಎಲ್ಲವೂ ಕುತೂಹಲಮಯವಾಗಿದ್ದ ವರ್ಣರಂಜಿತ ಪಾತ್ರಗಳು ನೀಡುತ್ತಿದ್ದ ಮನರಂಜನೆಯ ಕಡೆ ಗಮನ ಹರಿಸಿದ್ದ ತ್ಯಾಗನಿಗೆ ಊರ ಜನ ಮತ್ತೆ ಮತ್ತೆ ತಿರುಗಿ ನನ್ನತ್ತಲೇ ಯಾಕೆ ನೋಡುತ್ತಿದ್ದಾರೆ? ಎನ್ನುವ ಕಡೆ ಲಕ್ಷ್ಯವಿರಲಿಲ್ಲ. ಅಲ್ಲೇ ನಿಂತ ತಲೆನಡುಗಜ್ಜಿ ಇತ್ತ ಬಂದು ಬಾಯಿಗೆ ಎಲೆಯಡಿಕೆ ಸುಣ್ಣ ಎಸ್ಕೊಂತ ಇವನ ತಲೆ ಸವರಿ 'ಏನಪ್ಪ ಚನ್ನಾಗಿದ್ದೀಯ' ಎಂದು ಕೇಳಿದಳು. 'ಊ' ಅಂದು ಇತ್ತ ಬಂದ.

'ಯಂಗೋ ಉಷಾರು ಕಣ ಮಗನೆ' ಅಂದು ಬೀದಿಯಲ್ಲಿ ನಿಂತ ಯಾರದೋ ಜೊತೆಗೆ ಮಾತಿಗಿಳಿದು, 'ಅಯ್ಯೋ ದೇವರು ಎಲ್ಲರನ್ನೂ ಕಾಪಾಡ್ತನೆ' ಎನ್ನುತ್ತಾ ಮುಂದೆ ಹೋದಳು. ಊರ ಜನ ಸಣ್ಣ ಪುಟ್ಟ ಮಕ್ಕಳನ್ನು ಅವರವರ ಹೆಗಲ ಮೇಲೆ ಹೊತ್ತಿರುವುದನ್ನು, ಕೈ ಹಿಡಿದು ನಡೆಸುತ್ತಿರುವುದನ್ನು ತ್ಯಾಗ ನೋಡಿದ. ತಮ್ಮ ಪ್ರೀತಿಯ ಮಗುವನ್ನು ಹೆಗಲ ಮೇಲೆ ಕೂರಿಸಿಕೊಂಡು ಆನಂದದಿಂದ ಮೆರೆಸುವ, ಮೇಲೆ ಕುಳಿತು ಅವನು ಕೇಳುವ ಪ್ರಶ್ನೆಗಳಿಗೆ ಆ ಪುಟ್ಟ ಪಾದಗಳನ್ನು ನೇವರಿಸುತ್ತಾ ನಲ್ಮೆಯಿಂದ ಉತ್ತರಿಸುವ ಅರೆಗಣ್ಣ ಅಪ್ಪಂದಿರ ಕಂಡು ತನ್ನಪ್ಪ ನೆನಪಾಗಿ ನೀರ ಮಡುವಾಗಿ ಹೋದ ಕಣ್ಣುಗಳೊಳಗಿಂದ ಅಪ್ಪನನ್ನು ಎಷ್ಟು ಹುಡುಕಿದರೂ ಮಸುಕೋ ಮಸುಕು.

(ಸಶೇಷ)